ಛೇರ್ಮನ್ : ಪ್ರಸ್ತಾವ ಏನೆಂದರೆ, 2000ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿ ನೀಡುವುದು. ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಸಚಿವರು) : ಮಾನ್ಯ ಛೇರ್ಮನ್‌ರವರೆ, 2000 ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್ : ಅನುಬಂಧ-V ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಕನಕಪುರ): ಮಾನ್ಯ ಛೇರ್ಮನ್‌ರವರೆ, ಪರ್ಯಾಲೋಚನೆಯ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಪೂರಕ ಅಂದಾಜುಗಳ ಬಗ್ಗೆ ಮಾತನಾಡಬೇಕಾಗುತ್ತದೆ. ಇಷ್ಟಕ್ಕಿಂತ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಉದಾಹರಣೆಯನ್ನು ನೀಡಿ, ನಾನು ಎಲ್ಲದಕ್ಕೂ ಮೌನವಾಗಿಯೇ ಇರುತ್ತೇನೆ, ನನ್ನ ಬೆನ್ನು ನಾನು ತಟ್ಟಿಕೊಳ್ಳುವುದಿಲ್ಲ, ನಾನು ಮಾಡುವುದೇ ಸರಿ ಎನ್ನತಕ್ಕಂಥ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಏಕೆಂದರೆ, ಆಡಳಿತದ ಪಕ್ಷದ ಸದಸ್ಯರ ಸಂಖ್ಯೆ 133 ಇದ್ದುದ್ದು ಈಗ 151ಕ್ಕೆ ಏರಿದೆ. ಇದರಲ್ಲಿ ಅವರ ಜೊತೆಯಲ್ಲಿ ಎಷ್ಟು ಸದಸ್ಯರು ಇದ್ದಾರೆ, ಎಷ್ಟು ಸದಸ್ಯರು ಇಲ್ಲವೋ ನನಗಂತೂ ಗೊತ್ತಿಲ್ಲ, ಈಗ ನಾನು ಆ ಬಗ್ಗೆ ಮಾತನಾಡುವುದಕ್ಕೆ ಇಚ್ಛಿಸಬುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಏನು ವಿಚಾರಗಳನ್ನು ಹೇಳಿದ್ದಾರೆ, ಅವರ ಆಚಾರಕ್ಕೂ ಅವರ ವಿಚಾರಗಳಿಗೂ ಸಂಬಂಧವಿಲ್ಲ ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಒಂದೆರಡು ಉದಾಹರಣೆಗಳನ್ನು ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ, ಪರವಾಗಿಲ್ಲ ಆದರೂ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತೇನೆ. ಮಾನ್ಯ ಸಂಸದೀಯ ಸಚಿವರಿಗೆ ನಮ್ಮ ಮೇಲೆ ಅನುಮಾನ ಬದು ಬಿಟ್ಟಿತ್ತು. ಏಕೆಂದರೆ ಇವರೇನು ಫೈನಾನ್ಷಿಯಲ್ ಬಿಲ್ ಪಾಸ್ ಮಾಡಿಕೊಡುತ್ತಾರೋ ಅಥವಾ ಇಲ್ಲವೋ ಎಂದು ಅವರಿಗೆ ಅನುಮಾನವಿತ್ತು. ನಾವು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ. ಇವರು ಏನು ಹೇಳಿದರು ಎಂದರೆ, ನಮ್ಮದು ಪಾರದರ್ಶಕವಾದ ಸರ್ಕಾರ, ಸರ್ಕಾರದ ಎಲ್ಲಾ ಫ್ಯಾಕ್ಟ್ ಅನ್ನು ಕರಗಿಸುತ್ತೇವೆ. ಭ್ರಷ್ಟಚಾರದ ವಿರುದ್ಧ ಧರ್ಮಯುದ್ಧವನ್ನೇ ಸಾರಿದ್ದೇವೆ, ಇದು ಅಧಿಕಾರಿಗಳಿಂದ ನಿಯಂತ್ರಿತವಾದ ಸರ್ಕಾರವಲ್ಲ, ನಮ್ಮ ಮಂತ್ರಿಗಳೆಲ್ಲರೂ ಎಲ್ಲಾ ತಾಲ್ಲೂಕು, ಜಿಲ್ಲೆಗಳಿಗೆ ಹೋಗಿ ಸಮೀಕ್ಷೆ ಮಾಡಿ ಸರ್ಕಾರಿ ಆಡಳಿತದ ಯಂತ್ರವನ್ನು ಸರಿಮಾಡಿದ್ದಾರೆಂದು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿದ್ದರು. ಇದಕ್ಕೆ ನಾನು ಏನು ಹೇಳಿದೆ ಎಂದರೆ, ಸ್ವಾಮಿ ನಿಮ್ಮದು ಬಂಡವಾಳ ಇಲ್ಲದ ಬಡಾಯಿ, ಮುನ್ನೂರು ಕೋಟಿ ರೂಪಾಯಿಗಳನ್ನು ಖೋತಾ ತೋರಿಸಿದ್ದೀರಿ, ನಿಮ್ಮ ಸಂಪನ್ಮೂಲ ಕ್ರೋಢೀಕರಿಸತಕ್ಕಂಥಾದ್ದೇ ಮುನ್ನೂರು ನಲವತ್ತು ಕೋಟಿ ರೂಪಾಯಿಗಳು, ಎಂದು ಹೇಳಿದಿರಿ, ಅದರಲ್ಲಿ ಐವತ್ತು ಕೋಟಿ ರೂಪಾಯಿಗಳು ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್‌ನಿಂದ ಬರುತ್ತದೆ ಎಂದು ಹೇಳಿದ್ದೀರಿ, ಇದು ಬರುವುದಿಲ್ಲ. ಏಕೆಂದರೆ, ನೀವು ಏನು ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್‌ನ ಮೇಲೆ ಎಕ್ಸ್‌ಪೆಕ್ಟೇಷನ್ ಇಟ್ಟುಕೊಂಡಿದ್ದೀರಿ, ಅದು ಆಗುವುದಿಲ್ಲ, ರಿಜಸ್ಟ್ರೇಷನ್ ಆಗುವುದಿಲ್ಲ, ಇವರು ಜಾಸ್ತಿ ಮಾಡಿದಷ್ಟು ಹೊರಗಡೆ ಹೋಗುತ್ತಾರೆ. ಇದರಲ್ಲಿ ನೀವು ಏನು ಸಂಶಯ ಇಟ್ಟುಕೊಳ್ಳಬೇಡಿ ಏಕೆಂದರೆ ನಾವು ಎಲ್ಲಾ ಅನುಭವಿಸಿದ್ದೇವೆ. ಇವರು ಸುಮ್ಮನೆ ಹೇಳಿಕೊಂಡಿದ್ದಾರೆ. ಪ್ಲಾನಿಂಗ್ ಕಮೀಷನ್ ಮುಂದೆ ಹೋಗಿ ಇವರು ನಾನು ಈ ರಾಷ್ಟ್ರದ ಅತ್ಯಂತ ದಕ್ಷ ಮುಖ್ಯಮಂತ್ರಿ ಎಂದು ತೋರಿಸಿಕೊಳ್ಳುವುದಕ್ಕೆ

ಪ್ಲಾನಿಂಗ್ ಕಮಿಷನ್‌ನಲ್ಲಿ ಫಿಗರ್ಸ್‌ನ್ನು ಜಾಸ್ತಿ ಮಾಡುವುದಕ್ಕೆ ಇವರು ಬ್ಲೋ ಮಾಡಿದ್ದಾರೆಯೇ ಹೊರತು ಇದರಲ್ಲಿ ಬಂಡವಾಳ ಇಲ್ಲ. ಅಬಕಾರಿ ಮೇಲೆ ನೀವು ಏನು ಹಾಕಿದಿರಿ, ಇದ್ದಕ್ಕಿದ್ದ ಹಾಗೆ ಎಕ್ಸೈಸ್ ದೊರೆಗಳಿಗೆ ಬಹಳ ಅವಿಶ್ವಾಸದ ಮಾತನ್ನು ಹೇಳುತ್ತಿದ್ದೀರಿ, ಸಂತೋಷ ನಿಮಗೆ ಏನೇನು ಬೇಕೋ ಅದನ್ನು ತಾವು ಮಾತನಾಡಿ. ಆದರೆ, ನಿಮ್ಮ ಮಂತ್ರಿಮಂಡಲದಲ್ಲಿ ಇರತಕ್ಕಂಥ ಬಹಳ ಜನ ಡಿಪ್ಟಿಲರಿ ಒನರ್ಸ್ ಇದ್ದಾರೆ ಎನ್ನತಕ್ಕಂಥದ್ದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿಶೇಷವಾದ ನನ್ನದೊಂದು ನಿವೇದನೆ. ಈ ಅಂಕವನ್ನು ತಾವು ಗಮನದಲ್ಲಿಟ್ಟುಕೊಂಡು ಮಾತನಾಡಿದ್ದರೆ ಚೆನ್ನಾಗಿರುತ್ತಿತ್ತು. ಅಧಿಕಾರಿಗಳನ್ನು ನಿಯಂತ್ರಣಕ್ಕೆ ತರುತ್ತೇನೆಂದು ಒಂದು ಭಾಷಣ 89ರಲ್ಲಿ ಆಗಿತ್ತು. ರಷ್ಯಾದಲ್ಲಿ ಗ್ಲಾಸ್‌ನಾಸ್ಟ್ ಇಂಥ ಉದಾಹರಣೆಗಳನ್ನು ಕೊಟ್ಟು ಕ್ರಾಂತಿಕಾರಿ ಬಜೆಟ್ ಎನ್ನತಕ್ಕಂಥ ಮಾತನ್ನು ನಾನು ಕೇಳಿದ್ದೆ. ಇನ್ನೊಂದು ಕ್ರಾಂತಿಕಾರಿ ಪಾರದರ್ಶಕ ಬಜೆಟ್ ನಮ್ಮ ಮುಂದೆ ಇದೆ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕೆಲವಕ್ಕೆ ಸುಣ್ಣ ಬಣ್ಣ ಹಚ್ಚುವುದಕ್ಕೆ ಎಂದು ಹೇಳಿ ದುಡ್ಡನ್ನು ತೆಗೆದುಕೊಂಡಿದ್ದಾರೆ, ತೆಗೆದುಕೊಳ್ಳಲಿ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಸಚಿವರು) : ಇದು ಪೂರಕ ಅಂದಾಜುಗಳಲ್ಲ ಪೂರಕ ಅಂದಾಜು ಬೆಳಿಗ್ಗೆ ಮುಗಿದು ಹೋಗಿದೆ. It is only a supplementary budget, and the consequential Bill.

ಶ್ರೀ ಟಿ.ಜಿ.ಆರ್.ಸಿಂಧ್ಯಾ : ಇದಕ್ಕೆ ಪೂರಕವಾಗಿಯೇ ನಾನು ಮಾತನಾಡುತ್ತಿರುವುದು, ಧಾರವಾಡದಲ್ಲಿ ದಿನಾಂಕ : 6.2.2000ದಂದು ಕೃಷಿ ಮೇಳ-2000 ಎಂದು ಇದಕ್ಕಾಗಿ ಆರು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳನ್ನು ಹಂಚುವಂತಹ ಸಂದರ್ಭದಲ್ಲಿ ಒಬ್ಬ ಮುಖ್ಯಮಂತ್ರಿಗಳು ಭಾಗವಹಿಸಿದ ಕಾರ್ಯಕ್ರಮದಲ್ಲಿ ಚಿಲ್ಲರೆ ಆರು ಲಕ್ಷ ರೂಪಾಯಿಗಳು ಖರ್ಚಾದರೆ ಅದು ಯಾಪ ಮಹಾ ದೊಡ್ಡ ಮಾತು ಅನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ, ನೀವು ಫ್ಯಾಟ್ ಅನ್ನು ಕಡಿಮೆ ಮಾಡುತ್ತೇನೆಂದು ಹೇಳಿದಿರಿ, ಇದನ್ನು ನಾನು ಹೇಳಿದರೆ ತಮಗೆ ಕೋಪ ಬರುತ್ತದೆ. ನಿಮ್ಮ ಸರ್ಕಾರ ಬಂದ ಮೇಲೆ, ಕರ್ನಾಟಕ ನಿರ್ಮಾಣ ನಿಗಮವನ್ನು ಮುಚ್ಚಿಬಿಡುತ್ತಾರಂತೆ, ತಾವು ಮುಚ್ಚಬೇಕು ಎಂದು ತೀರ್ಮಾನಿಸಿದ್ದೀರಾ, ಮುಚ್ಚಲಿ. ಯಾರ್ಯಾರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ ಯಾರ್ಯಾರು ಏನೇನು ಮಾಡಿದ್ದಾನೆನ್ನುವ ವಿವರಕ್ಕೆ ನಾನು ಹೋಗುವುದಿಲ್ಲ. ಬಹುಶಃ ಈ ನಿಗಮದ ಮೇಲೆ ನಿಮಗೆ ಮುನಿಸು ಇರಬೇಕು ಅಂತ ಕಾಣಿಸುತ್ತದೆ. ಏಕೆಂದರೆ, ವಿಚಾರಣಾ ಯುಗವಾಗಿರುವುದರಿಂದ, ಫ್ಯಾಟ್ ರೆಡ್ಯೂಸ್ ಮಾಡುವುದಕ್ಕೋಸ್ಕರವಾಗಿಯೇ ಈ ನಿಗಮವನ್ನು ಮುಚ್ಚುತ್ತಿದ್ದಾರೆ. ಆದರೆ ನನಗೆ ಏನು ಅರ್ಥವಾಗಲಿಲ್ಲವೆಂದರೆ, ಕೆ.ಸಿ.ಸಿ.ಯನ್ನು ಮುಚ್ಚುತ್ತಾರಂತೆ, ಆದರೆ "ಕರ್ನಾಟಕ ರಾಜ್ಯ ಹೆದ್ದಾರಿಗಳು ಮತ್ತು ಸೇತುವೆಗಳನ್ನು ಅಭಿವೃದ್ಧಿಗೊಳಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಿ, ಇದಕ್ಕೆ ಒಂದು ಸಾವಿರ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ." ಇದರ ಅವಶ್ಯಕತೆ ಏನಿದೆ? ನೀವು ಇನ್ನೊಂದು ಕಾರ್ಪೊರೇಷನ್ ಮಾಡುವುದರ ಬದಲಾಗಿ ಕರ್ನಾಟಕ ನಿರ್ಮಾಣ ನಿಗಮದಿಂದಲೇ ಮಾಡಬಹುದಲ್ಲ. ಇದರಲ್ಲಿ ನಾವು ಮಾನ್ಯ ಜೆ.ಹೆಚ್.ಪಟೇಲರ ಹೆಸರಾಗಲಿ, ಮಾನ್ಯ ದೇವೇಗೌಡರವರ ಹೆಸರಾಗಲಿ, ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರಾಗಲಿ ಇಡಲಿಲ್ಲವಲ್ಲ. ಮಾನ್ಯ ಜಯಪ್ರಕಾಶ ನಾರಾಯಣರವರ ಹೆಸರನ್ನು ಇಡಲಿಲ್ಲವಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಕರ್ನಾಟಕ ನಿರ್ಮಾಣ ನಿಗಮವು ಮಾನ್ಯ ಜೆ.ಹೆಚ್.ಪಟೇಲರವರ ಕಾಲದಲ್ಲಿ ಆಗಿಲ್ಲ, ಅದು ಹಳೆಯದು. ಈ ನಿಗಮವನ್ನು ಮೊದಲು ಮಾಡಿದ ಉದ್ದೇಶ ಏನೆಂದರೆ, ಗುತ್ತಿಗೆದಾರರು ಬಹಳ ತೊಂದರೆ ಕೊಡುತ್ತಾರೆ, ಕೆಲವು ಸಲ ಇವರೆಲ್ಲರೂ ಸೇರಿಕೊಂಡು ಸಿಂಡಿಕೇಟ್ ಮಾಡಿಕೊಂಡು ಅವರವರೇ ಕಂಟ್ರಾಕ್ಟ್ ಹಂಚಿಕೊಂಡು ಕಳಪೆ ಕೆಲಸ ಮಾಡತಕ್ಕಂಥಾದ್ದು ಇರುತ್ತದೆ. ಇದಕ್ಕೆ ಸ್ಪರ್ಧಾತ್ಮಕವಾಗಿ ಸರ್ಕಾರದ ಒಂದು ಸಂಸ್ಥೆ ಇದ್ದರೆ ಒಳ್ಳೆಯ ಕ್ವಾಲಿಟಿಯನ್ನು ಮೆಂಟೇಸ್ ಮಾಡಬಹುದು ಹಾಗೂ ನಿಗಧಿತವಾದ ದರ ಮತ್ತು ಕಾಲಮಿತಿ ಹಾಗೂ ಒರಿಜಿನಲ್ ಅಂದಾಜು ಏನು ಇರುತ್ತದೆ ಆ ಅಂದಾಜಿನಲ್ಲೇ ಕೆಲಸವಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದು. ರಸ್ತೆಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಹೆಚ್ಚಿಗೆ ಸಾಲವನ್ನು ತೆಗೆದುಕೊಂಡು ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಲಾಗಿದೆ.

Sri.P.G.R.Sindya : After all it is an organisation which you are going to create. How do you reduce the paraphernalia ?

ಶ್ರೀ ಡಿ.ಬಿ.ಚಂದ್ರೇಗೌಡ: ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ರವರು ಸಬ್-ಕಾಂಟ್ರಾಕ್ಟ್ ಕೊಡುತ್ತಿದ್ದ ವಿಷಯ ತಮಗೂ ಗೊತ್ತಿರಬೇಕಲ್ಲವೆ ?

ಶ್ರೀ ಪಿ.ಜಿ.ಆರ್.ಸಿಂಧ್ಯಾ : ನಾನು ಸಬ್-ಕಾಂಟ್ರಾಕ್ಟ್ ಕೊಡುತ್ತಿಲ್ಲ ಎಂದು ಹೇಳಿದ್ದೇನೆಯೆ?

ಶ್ರೀ ಡಿ.ಬಿ.ಚಂದ್ರೇಗೌಡ: ಸಬ್-ಕಾಂಟ್ರಾಕ್ಟ್ ಕೊಡುವುದಾದರೆ, ಈ ಸಂಸ್ಥೆ ಏಕೆ ಇರಬೇಕು?

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಸರ್ಕಾರದಿಂದ ಆದೇಶ ಹೊರಡಿಸಿ ಸಬ್-ಕಾಂಟ್ರಾಕ್ಟ್‌ನ್ನು ಬ್ಯಾನ್ ಮಾಡಿ. ಫ್ಯಾಟ್‌ನ್ನು ಕಡಿಮೆ ಮಾಡುತ್ತೇವೆ ಮತ್ತು ಸರ್ಕಾರದ ಮಿಸಲೇನಿಯಸ್ ಹಾಗೂ ನಾನ್-ಪ್ಲಾನಿಂಗ್ ಎಕ್ಸ್‌ಪೆಂಡಿಚರನ್ನು ಮತ್ತು ಅಧಿಕಾರಿಗಳನ್ನು ಕಡಿಮೆ ಮಾಡುತ್ತೇವೆಂದು ಬೊಗಳೆ ಭಾಷಣ ಮಾಡತಕ್ಕಂಥ ನೀವು ಏಕೆ ಇದನ್ನು ಮಾಡುತ್ತಿಲ್ಲ? ರೋಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡತಕ್ಕಂಥ ಕೆಲಸವನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ರವರೇ ಮಾಡುತ್ತಾರೆ. ಆದರೂ ಸಹ ಇದನ್ನು ಅಬಾಲಿಷ್ ಮಾಡಿ ಇದಕ್ಕೊಂದು ಮತ್ತೆ ಹೊಸ ಹೆಸರನ್ನು ಇಡುವುದು. ಈ ಕೆಲಸ ಏತಕ್ಕಾಗಿ ಮಾಡುತ್ತಿದ್ದೀರಿ ? ಇದರ ಇನ್‌ಫ್ರಾಸ್ಟ್ರಕ್ಚರ್‌ಗೋಸ್ಕರ 1000 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇನ್‌ಫ್ರಾಸ್ಟ್ರಕ್ಚರ್ ಕಾರ್ಪೊರೇಷನ್‌ನನ್ನು ಡೆವಲಪ್ ಮಾಡುವುದಕ್ಕೆ 8.5 ಕೋಟಿ ರೂಪಾಯಿಗಳು ಬೇಕಾಗಿದ್ದು, ನಾವು ಸಾಲ ತೆಗೆದುಕೊಳ್ಳುವುದಕ್ಕೋಸ್ಕರ ಒಂದು ಕಾರ್ಪೊರೇಷನ್ ಬೇಕಾಗುತ್ತದೆಂದು ತಾವು ಹೇಳಿದ್ದೀರಿ. ಇದನ್ನು ಯಾರ ಮುಲಾಜಿಗೋಸ್ಕರ ಅಥವಾ ಯಾರನ್ನಾದರೂ ಅಲ್ಲಿ ನೇಮಕಾತಿ ಮಾಡಿಕೊಳ್ಳುವುದಕ್ಕೋಸ್ಕರ ಅಥವಾ ಮತ್ತೊಂದು ಏನಾದರೂ ಮಾಡುವುದಕ್ಕೋಸ್ಕರ ಈ ಸಂಸ್ಥೆಯನ್ನು ಮಾಡುತ್ತಿದ್ದೀರಾ? ಇದರ ಅಗತ್ಯತೆ ಏನಿತ್ತು ? ನಿಮ್ಮ ಫೈನಾನ್ಷಿಯಲ್ ಡಿಸಿಪ್ಲಿನ್ ಎಲ್ಲಿಗೆ ಹೋಯಿತು? ಹಾಗೆಯೇ ಪೂರಕ ಅಂದಾಜುಗಳ ಪುಸ್ತಕದಲ್ಲಿ ಪುಟ ಸಂಖ್ಯೆ 80ರಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವನ್ನು ಸರ್ಕಾರವು ಮಂಜೂರು ಮಾಡಿದೆ. ಇದರಡಿಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಅಗತ್ಯ ಸೌಲಭ್ಯಗಳನ್ನು ನಿಗಮವು ಕೈಗೊಳ್ಳಬೇಕಾಗಿರುವುದರಿಂದ ಪ್ರಸ್ತುತ ಆರ್ಥಿಕ ವರ್ಷದಲ್ಲಿ 100.00 ಲಕ್ಷ ರೂಪಾಯಿಗಳನ್ನು ನಿಗಮದ

ಇಕ್ವಿಟಿಗಾಗಿ ಅಭಿಯಾಚನೆಯಲ್ಲಿ ಸೇರಿಸಲಾಗಿದೆ ಎಂದು ಹೇಳಿದ್ದಾರೆ. ಶ್ರೀಮಾನ್ ದೇವರಾಜ್ ಅರಸುರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಬಡವರಿಗೆ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದು ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ನಮ್ಮ ಕಾಲದಲ್ಲಿ ಇದಕ್ಕಾಗಿ 7 ಸಾವಿರ ರೂಪಾಯಿಗಳನ್ನು ಕೊಡುತ್ತಿದುದನ್ನು 12 ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದೆವು, ಹಾಗೆಯೇ ನಂತರದ ಅವಧಿಯಲ್ಲಿ 12 ಸಾವಿರ ರೂಪಾಯಿಗಳಿಂದ 20 ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದೆವು. ಈಗ ನೀವು ಇದನ್ನು ಹೆಚ್ಚಿಗೆ ಮಾಡುವುದಕ್ಕೆ ಹೋಗದೆ, ಇದಕ್ಕೊಂದು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡುವುದಕ್ಕೆ ಹೊರಟಿದ್ದೀರಿ. ಇದಕ್ಕೆ ಇನ್ನೊಂದು ಕಾರ್ಪೊರೇಷನ್ ಏಕೆ ಬೇಕೆಂದು ನನಗಂತೂ ಅರ್ಥವಾಗುತ್ತಿಲ್ಲ. ಯಾರನ್ನು ಮೆಚ್ಚಿಸಬೇಕೆಂದು ಈ ಕೆಲಸವನ್ನು ಮಾಡುತ್ತಿದ್ದೀರಾ? ಈಗ ರಾಜೀವ್ ಗಾಂಧಿಯವರು ಸತ್ತು ಸ್ವರ್ಗದಲ್ಲಿದ್ದಾರೆ. ಶ್ರೀಯುತರ ಹೆಸರನ್ನು ನೀವು ಪ್ರಜ್ವಲಗೊಳಿಸಿದರೆ ನಿಮಗೆ ಓಟು ಹೆಚ್ಚಿಗೆ ಆಗುತ್ತದೆ ಎಂದು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವೆಂದು ಹೆಸರು ಇಟ್ಟಿದ್ದೀರೆಂದು ಕಾಣುತ್ತದೆ. ಇವರು ಯಾವ್ಯಾವ ರೀತಿ ಪ್ಲಾನ್ ಮಾಡುತ್ತಾರೆಂದರೆ, ಶ್ರೀಮತಿ ಇಂದಿರಾ ಗಾಂಧಿಯವರು ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದು, ತೀರಿಕೊಂಡರು. ಆದ್ದರಿಂದ ಇವರ ಹೆಸರಿನಲ್ಲಿ 'ಇಂದಿರಾ ಆವಾಸ್' ಯೋಜನೆಯನ್ನು ಜಾರಿಗೆ ತಂದರು. ಈಗ ಇದಕ್ಕೆ ರಾಜೀವ್ ಗಾಂಧಿ ಹೆಸರನನ್ನು ಇಟ್ಟಿದ್ದಾರೆ. ಇನ್ನು ಮುಂದೆ ಯಾವುದೋ ಒಂದು ಕಾರ್ಪೊರೇಷನ್ ಮಾಡಿ ಯಾರ ಹೆಸರನ್ನು ಇಡುತ್ತೀರೋ ನನಗಂತೂ ಗೊತ್ತಿಲ್ಲ. 1972ನೇ ಇಸವಿಯಿಂದ ಹುಡ್ಕೋರವರು ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ, ಜನತಾ ಮನೆಗಳ ನಿರ್ಮಾಣಕ್ಕೆ ಸಾಲವನ್ನು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂಥ ಅಕೌಂಟ್‌ಗಳನ್ನೆಲ್ಲಾ ಈಗ ದಿವಂಗತ ರಾಜೀವ್ ಗಾಂಧಿಯವರ ಹೌಸಿಂಗ್ ನಿಗಮಕ್ಕೆ ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ. ಇಷ್ಟೆಲ್ಲಾ ಇದ್ದರೂ ಸಹ ಯಾವ ಉದ್ದೇಶಕ್ಕೋಸ್ಕರ ಈ ನಿಗಮವನ್ನು ರಚನೆ ಮಾಡಿದ್ದೀರಾ? ಆದ್ದರಿಂದ, ಹೌಸಿಂಗ್ ಬೋರ್ಡ್‌ಗೆ ಈ ಹೆಸರನ್ನು ಕಟ್ಟಿದರೆ ಒಳ್ಳೆಯದು. ಇವತ್ತಿನ ದಿವಸ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮತ್ತು ಬಸ್ ನಿಲ್ದಾಣಕ್ಕೆ ಇಂಥ ಹೆಸರುಗಳನ್ನು ಇಡುವುದು ಒಂದು ಫ್ಯಾಷನ್ ಆಗಿದೆ. ಆದ್ದರಿಂದ, ಕರ್ನಾಟಕ ಎಂಬ ಪದವನ್ನು ತೆಗೆದು ರಾಜೀವ್ ಗಾಂಧಿ ಹೌಸಿಂಗ್ ಬೋರ್ಡ್ ಎಂದೇ ಮಾಡಬಹುದಲ್ಲವೆ? ರಾಜೀವ್ ಗಾಂಧಿಯವರ ಬಗ್ಗೆ ಅಷ್ಟೊಂದು ಅಭಿಮಾನ, ಗೌರವ ಇಟ್ಟುಕೊಂಡು ಅವರಿಗೆ ಅರ್ಪಣೆ ಮಾಡಿಕೊಳ್ಳಬೇಕೆಂದು ತಾವು ಇದ್ದರೆ, ಅದಕ್ಕೆ ನಾವೇನು ತಕರಾರು ಮಾಡುವುದಿಲ್ಲ. ನಾವ್ಯಾರೂ ಅಷ್ಟೊಂದು ಕೆಳಮಟ್ಟದ ಜನರೂ ಅಲ್ಲ. ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದೇನೆಂದರೆ, ಬೆಂಗಳೂರಿನಲ್ಲಿ ಅಪಘಾತವಾದರೆ ತುರ್ತಾಗಿ ಗೋಲ್ಡನ್ ಹವರೊಳಗೆ ವಿಕ್ಟೀಮ್ಸ್‌ನ್ನು ಕರೆದುಕೊಂಡು ಟ್ರೀಟ್‌ಮೆಂಟ್ ಮಾಡತಕ್ಕಂಥ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದರು. ಈ ಸಂದರ್ಭದಲ್ಲಿ ಸಂಜಯ್ ಗಾಂಧಿಯವರು ಅಪಘಾತದಲ್ಲಿ ಸತ್ತು ಹೋದರು. ಆಗ ಇಲ್ಲಿರತಕ್ಕಂಥ ಆಸ್ಪತ್ರೆಗೆ ಸಂಜಯ್ ಗಾಂಧಿ ಆಸ್ಪತ್ರೆ ಎಂದು ಹೆಸರಿಟ್ಟರು. ನಾನು ಮೊಟ್ಟ ಮೊದಲು 1983ರಲ್ಲಿ ಅಧಿಕಾರಕ್ಕೆ ಬಂದಾಗ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು, ನಾನು ಆರೋಗ್ಯ ಸಚಿವನಾಗಿದ್ದೆ, ನಂತರದ ಅವಧಿಯಲ್ಲಿ ನಾವು ಅಧಿಕಾರದಲ್ಲಿದ್ದರೂ ಆಸ್ಪತ್ರೆಯ ಹೆಸರನ್ನು ಬದಲಾವಣೆ ಮಾಡುವುದಕ್ಕೆ ಹೋಗಲಿಲ್ಲ. ಸಂಜಯ್

ಗಾಂಧಿ ಆಸ್ಪತ್ರೆ ಎಂಬ ಹೆಸರನ್ನೇ ಮುಂದುವರಿಸಿದೆವು. ಆದ್ದರಿಂದ, ಈಗ ಕರ್ನಾಟಕ ಹೌಸಿಂಗ್ ಬೋರ್ಡ್ ಎಂಬ ಪದವನ್ನು ತೆಗೆದು ರಾಜೀವ್ ಗಾಂಧಿ ಬೋರ್ಡ್ ಎಂದು ಹೆಸರಿಡಿ, ಯಾರು ಬೇಡವೆಂದು ಹೇಳುವುದಿಲ್ಲ. 12 ತಿಂಗಳಲ್ಲಿ ನೀವು ಬಡವರಿಗಾಗಿ 2 ಲಕ್ಷ ಮನೆಗಳನ್ನು ಕಟ್ಟಿದರೆ ವಿರೋಧಪಕ್ಷದವರು ನಿಮಗೆ ಸಾವಿರಾರು ಕೋಟಿ ನಮಸ್ಕಾರಗಳನ್ನು ಮಾಡುತ್ತೇವೆ. ಇದೆಲ್ಲಾ ಆಗದೇ ಇರುವಂಥ ಕೆಲಸವೆಂದು ನನಗೆ ಗೊತ್ತಿದೆ. ಈ ಸಂದರ್ಭದಲ್ಲಿ ಇದೆಲ್ಲಾ ಪ್ರಸ್ತಾಪ ಮಾಡಿ ನಿಮಗೆ ಏಕೆ ಚುಚ್ಚುತ್ತಿದ್ದೇನೆಂದರೆ, ಈ ಬಗ್ಗೆ ಸರ್ಕಾರ ಎಚ್ಚೆತ್ತುಕೊಳ್ಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಒಂದು ವರ್ಷದಲ್ಲಿ ಎರಡು ಲಕ್ಷ ಮನೆಗಳನ್ನು ಏಕೆ ಕಟ್ಟುವುದಕ್ಕಾಗುವುದಿಲ್ಲ ? ನಿಮ್ಮ ಕ್ಷೇತ್ರಕ್ಕೆ ಅಲಾಟ್‌ಮೆಂಟ್ ಆದಂಥ ಮನೆಗಳನ್ನು ನೀವು ಕಟ್ಟಿಸುತ್ತೀರವಲ್ಲವೆ ?

Sri P.G.R.Sindya : I am not going to ask any personal favours to my constituency.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಯಥಾ ಪ್ರಕಾರ ನಿಮ ಕ್ಷೇತ್ರಕ್ಕೆ ಅಲಾಟ್ ಆಗುತಕ್ಕಂಥ ಮನೆಗಳನ್ನು ಕಟ್ಟಲೇಬೇಕಲ್ಲವೆ ?

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಯಥಾಪ್ರಕಾರ ಬಂದರೆ ಬರಲಿ, ಇಲ್ಲದಿದ್ದರೆ ಬೇಡ. No. No we are not going to come and beg you.

ಶ್ರೀ ಎ.ಕೃಷ್ಣಪ್ಪ : ಒಬ್ಬೊಬ್ಬ ಶಾಸಕರ ಕೋಟಾದಲ್ಲಿ ಒಂದು ಅಥವಾ ಎರಡು ಸಾವಿರ ಮನೆಗಳನ್ನು ಬಡವರಿಗೆ ಕಟ್ಟಿಸಿ ಕೊಟ್ಟಾಗ, ಒಟ್ಟಾರೆ 224 ಕ್ಷೇತ್ರಗಳನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಎರಡು ಲಕ್ಷ ಮನೆಗಳನ್ನು ಕಟ್ಟಿಸುವುದಕ್ಕೆ ಸಾಧ್ಯತೆ ಇದೆ ಎಂದು ನಮ್ಮ ಮಾನ್ಯ ಗೃಹ ಸಚಿವರು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಇಷ್ಟು ಮಾಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ಈಗ ನೀವು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದೀರಿ. ಆದ್ದರಿಂದ ಎರಡು ಲಕ್ಷ ಮನೆಗಳಲ್ಲಿ ಒಂದು ಲಕ್ಷ ಮನೆಗಳನ್ನು ನಮ್ಮ ತಾಲ್ಲೂಕಿನಲ್ಲಿಯೇ ಕಟ್ಟಿಸಬಹುದು. ಕನಕಪುರದಲ್ಲಿ ಒಂದೊಂದು ಮನೆಯ ಜೊತೆಗೆ ಇನ್ನೊಂದು ಮನೆಯನ್ನು ಕಟ್ಟಿಸಬಹುದು. ಇದೆಲ್ಲಾ ಯಾರಿಗೆ ಗೊತ್ತು ನೀವೇ ಹೇಳಿ ? The question here is you want to save nd you want to reduce non-plan expenditure and also want to create government infrastructure. ಎಂದು ಬಜೆಟ್‌ನಲ್ಲಿ ಭಾಷಣ ಮಾಡುತ್ತೀರಿ. ಆದರೆ ಇಲ್ಲಿ ಯಾರನ್ನು ಮೆಚ್ಚಿಸುವುದಕ್ಕೋಸ್ಕರ ಮತ್ತು ಯಾವ ಕಾರಣವನ್ನು ಇಟ್ಟುಕೊಂಡು ಇನ್‌ಫ್ರಾಸ್ಟಕ್ಚರ್ ಡೆವಲಪ್‌ಮೆಂಟ್ ಮಾಡುವುದಕ್ಕೆ ಹೊರಟಿದ್ದೀರಿ ? ಆದ್ದರಿಂದ ನಿಮ್ಮ ದುರುದ್ದೇಶವನ್ನು ನಾವು ಹುಡುಕಿ ಹೇಳುತ್ತಿದ್ದೇವೆ ಅಷ್ಟೆ. ಯಾರನ್ನು ಮೆಚ್ಚಿಸುವುದಕ್ಕೋಸ್ಕರ ಇದನ್ನು ಮಾಡುತ್ತಿದ್ದೀರೆಂದು ಜಗಜ್ಜಾಹೀರ್ ಆಗುವುದಿಲ್ಲವೆ ? ನಿಮ್ಮ ಬಣ್ಣ ಬಯಲಾಗುವುದಿಲ್ಲವೆ ? ಇವತ್ತಿನದಿವಸ ಕರ್ನಾಟಕ ರಾಜ್ಯದ ಜನತೆಯ ದುಡ್ಡನ್ನು ತೆಗೆದುಕೊಂಡು ಯಾರನ್ನೋ ಮೆಚ್ಚಿಸುವುದಕ್ಕೆ ಹೊರಟಿದ್ದೀರಿ. ನಾವೇನಾದರೂ ಹೇಳುವುದಕ್ಕೆ ಹೋದರೆ, ಆ ರೀತಿ ಹೇಳುತ್ತೀರಾ. ಈ ರೀತಿ ಹೇಳುತ್ತಿರೆಂದು ನಿಮಗೆ ಬೇಜಾರಾಗುತ್ತದೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾಗಿದೆ.

ಇವತ್ತಿನದಿವಸ ಬೆಂಗಳೂರಿನ ಮಿನಿಸ್ಟರ್ ರವರು ಒಳ್ಳೆಯ ಕೆಲಸವನ್ನು ಮಾಡಿಸುತ್ತಾರೆ, ಆದರೆ ಅವರ ಇಲಾಖೆಗೆ ಹಣ ಬಿಡುಗಡೆಯಾಗಿಲ್ಲ. ಆದ್ದರಿಂದ ಅವರು ಯಾವ ರೀತಿ ಕೆಲಸ ಮಾಡಿಸುತ್ತಾರೆ? ಇನ್ನು ಬಡವರಿಗೆ ಮನೆಗಳನ್ನು ಕಟ್ಟುವ ವಿಚಾರದಲ್ಲಿ, 'ಇಂದಿರಾ ಆವಾಸ್' ಯೋಜನೆಯೊಂದನ್ನು ಬಿಟ್ಟರೆ, ಅಂಬೇಡ್ಕರ್ ಯೋಜನೆಗೆ ಮತ್ತು ಆಶ್ರಯ ಯೋಜನೆಗೆ ಇದುವರೆಗೆ ಹಣವನ್ನು ಬಿಡುಗಡೆ ಮಾಡಿಲ್ಲ. ಇವತ್ತಿನದಿವಸ ವಿರೋಧ ಪಕ್ಷದಲ್ಲಿರತಕ್ಕಂಥ ಶಾಸಕರ ಕ್ಷೇತ್ರಗಳಿಗೆ ಕೊಡುವುದು ಬೇಡ. ಆದರೆ ನೀವು ಆಡಳಿತ ಪಕ್ಷದಲ್ಲಿರತ್ಕಂಥ ಶಾಸಕರ ಕ್ಷೇತ್ರಕ್ಕೂ ಸಹ ಹಣ ಬಿಡುಗಡೆ ಮಾಡಿಲ್ಲ. ಚುನಾವಣೆಯ ಪೂರ್ವದಲ್ಲಿ ಓಲ್ಡೇಜ್ ಪೆನ್‌ಷನ್ನು 75 ರೂಪಾಯಿಗಳಿಂದ 125 ರೂಪಾಯಿಗಳಿಗೆ ಹೆಚ್ಚು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಇವಕ್ಕೆಲ್ಲಾ 'ತಿರುಪತಿ ನಾಮ'ವನ್ನು ಹಾಕಿಬಿಟ್ಟಿದ್ದಾರೆ. ಇಂಥವನ್ನೆಲ್ಲಾ ಮಾಡಿಲಿಲ್ಲವೆಂದು ನಾವು ಹೇಳಿದಾಗ, ತಾವು ಇದನ್ನು ಬಿಟ್ಟು ಪೂರಕ ಅಂದಾಜಿನಲ್ಲಿ ಬಜೆಟ್‌ನ್ನು ತಂದು ಇಲ್ಲಿ ಅಪ್ರೂವ್ ಮಾಡಿಕೊಳ್ಳುವುದಕ್ಕೆ ಹೊರಟಿದ್ದೀರಿ. ಈಗ ನಮಗೆ ವಿಧಿ ಇಲ್ಲ, ನಾವು ಕಡಿಮೆ ಸಂಖ್ಯೆಯಲ್ಲಿದ್ದೇವೆ. ಆದ್ದರಿಂದ ತಾತ್ಪರ್ಯಿಕವಾಗಿ ತಾವು ಹೋಗತಕ್ಕಂಥ ದಾರಿ ಸರಿಯಿಲ್ಲ ಮತ್ತು ನೀವು ಮೊದಲು ಏನು ಹೇಳಿರುತ್ತೀರಿ, ಅದನ್ನು ಮಾಡುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ. ನೀವು ಹೋಗುತ್ತಿರುವ ದಾರಿ ಸರಿ ಇದೆಯೇ ಎಂದು ನೀವೇ ಯೋಚನೆ ಮಾಡಿ ಮತ್ತು ಕಲೆಕ್ಟಿವ್ ವಿಜ್‌ಡಮ್ ಇದರಲ್ಲಿ ಪ್ರಿವೇಲ್ ಆಗುತ್ತದೆಯೆ ಎಂದು ನಿಮ್ಮ ಆತ್ಮಕ್ಕೆ ನೀವೇ ಪ್ರಶ್ನೆ ಹಾಕಿಕೊಳ್ಳಿ. ಖಂಡಿತವಾಗಿ ಇದು ಆಗುತ್ತಿಲ್ಲ. ನಿಮಗೆ ಇರತಕ್ಕಂಥ ಸೀನಿಯಾರಿಟಿ, ಅನುಭವದಲ್ಲಿ ನಿಮ್ಮ ಕ್ಯಾಬಿನೆಟ್ ಇದನ್ನು ಕಲೆಕ್ಟಿವ್ ಆಗಿ ಮಾಡುತ್ತಿಲ್ಲವೆಂದು ನನ್ನ ನಂಬಿಕೆಯಾಗಿದೆ. ಇದೆಲ್ಲಾ ಇದ್ದಿದ್ದರೆ ಈ ರೀತಿಯಾದ ಬಜೆಟ್ ಬರುತ್ತಿರಲಿಲ್ಲ. ಕಳೆದ ಆರು ತಿಂಗಳಿಂದ ಸರ್ಕಾರದಲ್ಲಿ ಏನು ಬದಲಾವಣೆ ಆಗಿಲ್ಲ. ಆಡಳಿತ ಪಕ್ಷದ ಶಾಸಕರು ಇದನ್ನೆಲ್ಲಾ ಹೇಳುವುದಕ್ಕೆ ಆಗದೇ ಇರುವುದರಿಂದ ನೀವಾದರೂ ಹೇಳಿ ಎಂದು ನಮ್ಮ ಹತ್ತಿರ ಹೇಳಿಕೊಳ್ಳುತ್ತಾರೆ. ನಾವು ಅವರ ಹೆಸರುಗಳನ್ನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅದು ತಪ್ಪಾಗುತ್ತದೆ. ಆದ್ದರಿಂದ ಇದು ಬಹಳ ಗಂಭೀರವಾದ ವಿಷಯ. ಈ ವಿಷಯದ ಬಗ್ಗೆ ನಾನು ಮತ್ತು ಮಾನ್ಯ ಸೋಮಶೇಖರ್‌ರವರು ಹಾಗೂ ಶ್ರೀ ಎಸ್. ಎಸ್. ಪಾಟೀಲ್‌ರವರು ಈ ವಿಷಯದ ಮೇಲೆ ಬಹಳ ಮಾತನಾಡಬೇಕೆಂದು ಇದ್ದೆವು. ಆದರೆ ಇವತ್ತು ಸಂಜೆ ಕಾರ್ಯಕ್ರಮವಿದ್ದು ಸಮಯ ಇಲ್ಲದೇ ಇರುವುದರಿಂದ ಮತ್ತು ಇದಕ್ಕೆ ಸಹಕಾರ ಕೊಡುತ್ತೇವೆಂದು ಸಂಸದೀಯ ವ್ಯವಹಾರಗಳ ಮಂತ್ರಿಗಳಿಗೆ ನಾವು ಭರವಸೆ ಕೊಟ್ಟಿರುವುದರಿಂದ ಈ ನಾಲ್ಕು ಕವಿ ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಾಯಿಗೆ ಬೀಗ ಹಾಕಿಕೊಂಡು ಡಿ. ವಿ. ಜಿ. ಯವರ 'ಮಂಕುತಿಮ್ಮನ ಕಗ್ಗ'ದಲ್ಲಿ ಹೇಳಿರುವಂತೆ ಆಚರಣೆ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಿಂದ, ಮಾರ್ಚ್ 2001ನೇ ಇಸವಿಯೊಳಗೆ ಎರಡು ಲಕ್ಷ ಮನೆ 19,000 ಕೋಟಿ ರೂಪಾಯಿಗಳ ಬಜೆಟ್ ಮತ್ತು 300 ಕೋಟಿ ರೂಪಾಯಿಗಳ ಕೊರತೆ ಹಾಗೂ ಅಬ್ಬರಿಗೆ ಸಂಬಂಧಪಟ್ಟಂತೆ ಆ ಮೇಲೆ ಚರ್ಚೆ ಮಾಡೋಣ. ಈಗ ಸದ್ಯಕ್ಕೆ ಮಾತ್ರ ನಾವು ವಿರೋಧ ಮಾಡುತ್ತಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕೆಲವು ವಿಚಾರಗಳಲ್ಲಿ ಕ್ಲಾರಿಟಿ ಬೇಕಾಗುತ್ತದೆ. ಮಾನ್ಯ ಸಿಂಧ್ಯಾರವರು ಇದನ್ನು ಹೇಗೆ ಮಾಡುತ್ತೀರಿ, ಅದನ್ನು ಹೇಗೆ ಮಾಡುತ್ತೀರಿ, ಮತ್ತೊಂದನ್ನು ಹೇಗೆ ಮಾಡುತ್ತೀರಿ ಎಂದು ಪ್ರಶ್ನೆ ಮಾಡುತ್ತಿದ್ದರು. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಸ್ಪಷ್ಟವಾದ ಕನ್ನಡದಲ್ಲಿ ವಿಚ್ಚುಕಾತ್ಮಾಗಿ

ಉತ್ತರವನ್ನು ಹೇಳಿದ್ದಾರೆ. ಆದರೆ ಪುನಃ ಅದೇ ಸಮಸ್ಯೆಯ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಒಂದು ನಾನು ಹೇಳಬೇಕಾಗಿರುವುದು, ರೋಡ್ ಸಲುವಾಗಿ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಏಕೆ ತೆಗೆದಿರುತ್ತೀರಿ. ಒಂದು ಅತ್ಯಂತ ದೊಡ್ಡ ವ್ಯತ್ಯಾಸವೇನೆಂದರೆ: ನಿರ್ಮಾಣ ನಿಗಮಕ್ಕೆ ಸರ್ಕಾರ ಎಷ್ಟು ಹಣ ಕೊಡುತ್ತದೆ? ಎಷ್ಟು ಕೆಲಸವನ್ನು ಕೊಡುತ್ತದೆ ಅದನ್ನು ಇಂಪ್ಲಿಮೆಂಟ್ ಮಾಡುವುದು. ಎರಡನೆಯದು ರೋಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದು ಒಂದು ಏಜೆನ್ಸಿ not only to implement, but riase funds, resources. ರಿಸೋರ್ಸ್‌ನ್ನು ಮೊಬಲೈಸ್ ಮಾಡುವುದಕ್ಕೆ ಒಂದು ಏಜೆನ್ಸಿಯನ್ನು ಸರ್ಕಾರ ಮಾಡಿದೆ. ಈ ಏಜೆನ್ಸಿಗೆ ಸೀಡ್ ಮನಿ ಎಂದು 10 ಕೋಟಿ ರೂಪಾಯಿಗಳನ್ನು ಕೊಟ್ಟಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ನಾವು 780 ಕೋಟಿ ರೂಪಾಯಿಗಳನ್ನು ನಬಾರ್ಡ್‌ದಿಂದ ತೆಗೆದುಕೊಂಡಿದ್ದು ಅದಕ್ಕೆ ನಾವು ನಿಗಮವನ್ನು ಮಾಡಲಿಲ್ಲ. ಆ ಕೆಲಸವನ್ನು ಪಿಡಬ್ಲ್ಯೂಡಿಯೇ ಮಾಡಿದ್ದು ಇರುತ್ತದೆ, ನೀವು ಕೂಡ ಹಾಗೆಯೇ ಪಿಡಬ್ಲ್ಯೂಡಿಗೆ ತೆಗೆದುಕೊಳ್ಳಿ, ನಬಾರ್ಡ್‌ದಿಂದ ಹಣ ತೆಗೆದುಕೊಂಡು ಇನ್ನೊಂದು ನಿಗಮವನ್ನು ಮಾಡಿ, ಅದಕ್ಕೆ ಯಾರದ್ದಾದರೂ ಹೆಸರನ್ನು ಇಡಬೇಕೆಂದು ಇದ್ದಿರೋ?

ಶ್ರೀ ಡಿ.ಬಿ.ಚಂದ್ರೇಗೌಡ: ನಿಮ್ಮ ಕಾಲದಲ್ಲಿ ನೀವು ನಿಮಗೆ ತೋಚಿದ ಹಾಗೆ ಮಾಡಿದ್ದೀರಿ, ನಾವು ನಮಗೆ ಅನುಕೂಲವಾದ ಹಾಗೆ ವಾತಾವರಣವನ್ನು ಸೃಷ್ಟಿ ಮಾಡಿದ್ದೇವೆ. ನೀವು ಮಾಡಿದ್ದನ್ನು ನಾವು ಮಾಡಬೇಕು, ನಾವು ಮಾಡಿದ್ದನ್ನು ನೀವು ಒಪ್ಪುವುದಿಲ್ಲ, ಇದು ಬೇರೆ ಪ್ರಶ್ನೆ. ಆದರೆ ನಾನು ಅದನ್ನು ಬಿಡಿಸಿ ಹೇಳುವುದಕ್ಕೆ ಹೋಗಿದ್ದು ಒಂದು ನಿರ್ಮಾಣ ನಿಗಮ ಇನ್ನೊಂದು ರೈಜಿಂಗ್ ರಿಸೋರ್ಸ್, ಆ ರಿಸೋರ್ಸ್‌ನ್ನು ರೈಜ್ ಮಾಡುವುದಕ್ಕೆ ಸೀಡ್ ಮನಿ ಬೇಕು. That is why we have provided Rs. 10 crore. We will be adding another Rs. 18 crore in the coming year. ಆದ್ದರಿಂದ ಆ ನಿರ್ಮಾಣ ನಿಗಮಕ್ಕೂ ರೈಜಿಂಗ್ ರಿಸೋರ್ಸ್ ಇದಕ್ಕೂ ದಯವಿಟ್ಟು ಹೋಲಿಸಬೇಡಿ. ರೋಡ್‌ನ್ನು ಡೆವಲಪ್‌ಮೆಂಟ್ ಮಾಡಬೇಕೆಂದು ನೀವು ಹೇಳುವುದು ನಿಜ, ದುಡ್ಡು ಎಲ್ಲಿ ಇದೆ? 780 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು ನಾವೇನು ನಿಗಮವನ್ನು ರಚನೆ ಮಾಡಲಿಲ್ಲ. ಸರ್ಕಾರ ಕೊಟ್ಟಿತೋ, ಬಿಟ್ಟಿತೋ ಬಜೆಟ್‌ನಲ್ಲಿ ಎಷ್ಟು ಆಲೋಕೇಷನ್ ಆಗಿತ್ತು ಆ ಫಂಡ್ಸ್ ಹೋಯಿತು, Threrefore, we have come out with a concrete proposal to have a developmental authority which can sustain itself by providing the funds. ನಾವು ಈಗ ಕೃಷ್ಣಾ ಜಲನಿಗಮವನ್ನು ಮಾಡಿದ್ದೇವೆ ಅದಕ್ಕೆ ಸಹಸ್ರಾರು ಕೋಟಿ ರೂಪಾಯಿಗಳನ್ನು ಎತ್ತಿದ್ದೇವೆ, ಅದಕ್ಕೆ ಬಳಕೆ ಮಾಡಿದ್ದೇವೆ. ಹಾಗೆಯೇ ರೋಡ್ ಸಲುವಾಗಿ ಒಂದು ನಿಗಮವನ್ನು ಮಾಡಿ ಅದಕ್ಕೆ ಬೇಕಾಗಿರತಕ್ಕಂಥ ರಿಸೋರ್ಸ್‌ನ್ನು ಅದರ ಮೂಲಕ ಮೊಬಲೈಸ್ ಮಾಡಿ ಅದೇ ಏಜೆನ್ಸಿಯ ಮೂಲಕ ಇಂಪ್ಲಿಮೆಂಟ್ ಮಾಡತಕ್ಕಂಥ ಕಾರ್ಯಕ್ರಮ. ಇದಕ್ಕೆ ಇದಕ್ಕಿಂತ ಹೆಚ್ಚು ವಿವರಣೆ ಅನಗತ್ಯ ಎಂದು ಕಾಣುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ನೀವು ವಿವರಣೆಯನ್ನು ಕೊಡುಬೇಕುಸ ಕೊಡುತ್ತೀರಿ, ಏನು ಮಾಡುವುದಕ್ಕಾಗುತ್ತದೆ ಅನಿವಾರ್ಯ, ಮಾಡಿ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಸಿಂಧ್ಯಾರವರು ಎಲ್ಲಾ ಮನುಷ್ಯರಿಗೂ ಕೈ ಹಾಕುತ್ತಿದ್ದಾರೆ. ಎಲ್ಲಾ ಸದಸ್ಯರನ್ನು ಕೋಟ್ ಮಾಡುತ್ತಾರೆ. ಆದರೆ ನಾವು ಅಥೈಸುವಾಗ ತಪ್ಪು ತಿಳಿದುಕೊಳ್ಳುವಂಥ ಪ್ರಯತ್ನವನ್ನು

ಮಾಡಬಹುದು. ನೋಡೋಣ, ಅದಕ್ಕೆ ಚಾಲೆಂಜ್. ಎರಡು ಲಕ್ಷ ಮನೆಗಳನ್ನು ಹೇಗೆ ಕಟ್ಟುತ್ತೀರಿ ? ಮನಸ್ಸಿದ್ದರೆ ಮಾರ್ಗ ಇದ್ದೇ ಇದೆ. ಮನಸ್ಸೇ ಇಲ್ಲದಿದ್ದರೆ ಮಾರ್ಗ ಎಲ್ಲಿಂದ ಬರುತ್ತದೆ ? ಎರಡು ಲಕ್ಷ ಮನೆಗಳನ್ನು ಸರ್ಕಾರ ಹೇಗೆ ಕಟ್ಟಬೇಕು ಎನ್ನುವುದನ್ನು ಸರ್ಕಾರ ಬೆಂಗಳೂರಿನಲ್ಲಿ ಕುಳಿತುಕೊಂಡು ಮಾಡುವುದಿಲ್ಲ There is a separate agency. ಒಂದೊಂದು ಸಮಿತಿಯನ್ನು ಮಾಡುತ್ತೇವೆ, ಆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುತ್ತೇವೆ. ಹಿಂದೆ ಫ್ರೀ ಫ್ಯಾಬ್ರಿಕೇಟೆಡ್ ಹೌಸ್ ಮಾಡಬೇಕೆಂದು ಶ್ರೀಮಾನ್ ಬಂಗಾರಪ್ಪನವರ ಕಾಲದಲ್ಲಿ ಪ್ರಯತ್ನ ನಡೆಯಿತು. ನಿಜವಾಗಿಯೂ ಇದು ಒಳ್ಳೆಯ ಕಾರ್ಯಕ್ರಮ. ಅದನ್ನು ಯಾರು ಅರ್ಥವನ್ನು ಮಾಡಿಕೊಳ್ಳಲಿಲ್ಲ. ಮನೆಕಟ್ಟುವುದು ಬಹಳ ಸುಲಭವಲ್ಲ. ಮಲೆನಾಡಿನಲ್ಲಿ ಕೇಳಬೇಕೆಂದರೆ ಮನೆ ಕಟ್ಟುವುದಕ್ಕೆ ಮರಗಳು ಸಿಕ್ಕುವುದಿಲ್ಲ. ತೊಲೆಗಳು ಸಿಕ್ಕುವುದಿಲ್ಲ, ಬಾಗಿಲು ಕಿಟಿಕಿಗಳಿಗೆ ಮರಗಳು ಸಿಕ್ಕುವುದಿಲ್ಲ. ಇಂತಹದ್ದನ್ನು ಪರಿಪೂರ್ಣವಾಗಿ ವಿಮರ್ಶೆ ಮಾಡಿ ಅದಕ್ಕೆ ಏನಾದರೊಂದು ಅರ್ಥವನ್ನು ಕೊಡಬೇಕು. Therefore, it is again a sort of Corporation. ಅಂತಹ ದೋಷಗಳು ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಮಾಡಿದ್ದು, ಪ್ರತಿ ಕ್ಷೇತ್ರದಲ್ಲಿ ಫಲಾನುಭವಿಗಳು ಬರುತ್ತಾರೆ. ಒಂದೊಂದು ಕ್ಷೇತ್ರಕ್ಕೆ ಸುಮಾರು ಒಂದು ಸಾವಿರ ಮನೆಗಳು ಬರುತ್ತವೆ. ಒಂದು ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳನ್ನು ಕಟ್ಟುವುದು ಕಷ್ಟವೇ ? ಇದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳುತ್ತೇನೆ. ಆದರೆ ಇದಕ್ಕೆ ಇರತಕ್ಕಂಥ ತೊಂದರೆಗಳು ಏನು ? ಬರೀ ಮರಮುಟ್ಟುಗಳ ತೊಂದರೆ ಮಾತ್ರ ಅಲ್ಲ. ಇದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಿಗೆ ಗೊತ್ತು, ಜಮೀನು ಇಲ್ಲ, ಇವತ್ತು ಮನೆ ಕಟ್ಟುವುದಕ್ಕೆ ಬೇಕಾದ ಜಾಗವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಿಂದಿನ ಸರ್ಕಾರ ತೀರ್ಮಾನ ಮಾಡಿತ್ತು, ಎಷ್ಟಾದರೂ ಬೆಲೆಯಾಗಲಿ ಖಾಸಗಿ ಜಮೀನನ್ನು ಕೊಂಡು ಕೊಂಡು ಮನೆಗಳನ್ನು ಕಟ್ಟಿಸಬೇಕೆಂದು ಮಾಡಿತ್ತು. ಅದಕ್ಕಾಗಿ ನಾವು ಈಗ ಹೊಸ ಆಲೋಚನೆಗಳನ್ನು ಮಾಡಿದ್ದೇವೆ. ಮೀಸಲು ಜಾಗದಲ್ಲಿರುವ ಜಮೀನನ್ನು ಬಿಡಿಸಿ ಕೊಡುವುದು, ಅರಣ್ಯ ಇಲಾಖೆಯಿಂದ ಜಮೀನು ಕೊಟ್ಟರೆ ಮನೆಗಳನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆ. ಮನೆಗಳನ್ನು ಕಟ್ಟುವುದಕ್ಕೆ ಹಣ ಒದಗಿಸುವುದು ಸಮಸ್ಯೆಯೇ ಅಲ್ಲ, ಹೇಗಾದರೂ ಮಾಡಿ ಹಣ ತಂದು ಕೊಡಬಹುದು. ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅದನ್ನು ಆರಗಿಸಿಕೊಂಡು ಪರಿಹಾರವನ್ನು ಹುಡುಕುವುದಕ್ಕೆ ಯೋಚನೆಯನ್ನು ಮಾಡಿದ್ದೇವೆ ಮತ್ತೊಂದು ಸಲಹೆಯನ್ನು ತಮಗೆ ಹೇಳುತ್ತಿದ್ದೇನೆ. It is a consequential Bill. ಇದನ್ನು ಬೆಳಿಗ್ಗೆ ಮಾಡಿದ್ದೇವೆ. ಅದು ಮೇಲ್ಮನೆಗೆ ಹೋಗಬೇಕಾದರೆ ಮಧ್ಯದಲ್ಲಿ ನಿಮ್ಮ ಅನುಭವದ ಆಧಾರದ ಮೇಲೆ ಇದನ್ನು ಒಪ್ಪುತ್ತೀರೆಂದು ಹೇಳುತ್ತೇನೆ. I would recommend for taking up for consideration and voting.

ಶ್ರೀ ವೈ.ಕೆ.ರಾಮಯ್ಯ : ಮಾನ್ಯ ಛೇರಮನ್‌ರೆ, ನನಗೆ ಗೊತ್ತಿರುವ ಪ್ರಕಾರ ಒಂದು ಮಾಹಿತಿಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಬಾರ್ಡ್‌ದಲ್ಲಿ ನಾವು ಸಾಲವನ್ನು ತೆಗೆದುಕೊಳ್ಳಲಿಲ್ಲವೇ, ನೀವು ಸಾಲವನ್ನು ತೆಗೆದುಕೊಳ್ಳುವುದಕ್ಕೆ ಕಾರ್ಪೊರೇಷನ್ ಏಕೆ ಎಂದು ನಮ್ಮ ಸ್ನೇಹಿತರು ಹೇಳಿದ್ದಾರೆ. ಅವರು ಬಹಳ ಚಿನ್ನಾಗಿ ಮಾತನಾಡುತ್ತಾರೆ ಪರವಾಗಿಲ್ಲ. ನನಗೆ ತಿಳಿದಿರುವ ಮಾಹಿತಿ ಪ್ರಕಾರ ಪರಿಸ್ಥಿತಿ ಏನಾಗಿದೆ ಎಂದರೆ ತಾವು ನಬಾರ್ಡ್‌ದಿಂದ ತೆಗೆದುಕೊಂಡಿರತಕ್ಕಂಥ ಸಾಲವನ್ನು ವಾಪಸ್ಸು ಕಟ್ಟಿರುವುದಿಲ್ಲ. ಆ ಕಾರಣಕ್ಕಾಗಿ ಸರ್ಕಾರದವರಿಗೆ ನಬಾರ್ಡ್‌ದವರು ಸಾಲವನ್ನು ನೇರವಾಗಿ ಕೊಡುವುದಕ್ಕೆ ಸಿದ್ಧವಿಲ್ಲ. ನಬಾರ್ಡ್‌ದವರು ಸರ್ಕಾರಕ್ಕೆ ಸಾಲವನ್ನು ಕೊಟ್ಟರು, ತಮಗೆ ಗೊತ್ತಿದೆ. ಕೊಟ್ಟ ಸಾಲವನ್ನು ನೀವು ವಾಪಸ್ಸು

ಕೊಟ್ಟಿಲ್ಲ, ಮಾನ್ಯ ಎಸ್. ಎಸ್. ಪಾಟೀಲ್‌ರು ಕೋ-ಆಪರೇಟಿವ್ ದಲ್ಲಿ ಎಕ್ಸಪರ್ಟ್.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ನಿಮಗೆ ಗೊತ್ತಿರತಕ್ಕಂಥ ಮಾಹಿತಿ ಸಂಪೂರ್ಣ ಸತ್ಯಕ್ಕೆ ದೂರವಾದುದು

ಶ್ರೀ ವೈ. ಕೆ. ರಾಮಯ್ಯ : ನಿಜ ಇರುವುದನ್ನು ಹೇಳಿದರೆ ನಮಗೆ ಏಕೆ ಸಿಟ್ಟು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ : ನನಗೆ ಸಿಟ್ಟಿಲ್ಲ.

ಶ್ರೀ ವೈ. ಕೆ. ರಾಮಯ್ಯ : ಹಾಗಾದರೆ ಕೇಳಿ, ನೀವು ಹೇಳಿದ್ದನ್ನು ನಾನು ಬೆಳಿಗ್ಗೆಯಿಂದ ಕೇಳುತ್ತಿದ್ದೇನೆ. ನಬಾರ್ಡ್‌ನವರು ಕೊಟ್ಟಂಥ ಸಾಲವನ್ನು ಸರ್ಕಾರ ಮಾಪಸ್ಸು ಕೊಡದೇ ಇದ್ದ ಕಾರಣಕ್ಕಾಗಿ ಮತ್ತೆ ನಬಾರ್ಡ್‌ದವರು ಸರ್ಕಾರಕ್ಕೆ ಮುಂದಿನ ಸಾಲವನ್ನು ಕೊಡುವುದಕ್ಕೆ ಸಿದ್ಧರಿಲ್ಲ, ನನಗೆ ತಿಳಿದಿರುವ ಮಾಹಿತಿಯನ್ನು ನಾನು ಹೇಳಿದ್ದೇನೆ. ನಾನು ಯಾವ ಮಿನಿಸ್ಟರೂ ಆಲ್ಲ ಅದು ನನಗೆ ಗೊತ್ತಿದೆ. ನೀವು ಅದರ ಬಗ್ಗೆ ಡಿಮ್ಯಾಂಡ್ ಮಾಡಬೇಕಾಗಿಲ್ಲ. ಮಾಹಿತಿಯನ್ನು ಹೇಳಬೇಕಾದರೆ ಮಿನಿಸ್ಟರಾಗಿರಬೇಕಾಗಿಲ್ಲ. ಅದಕ್ಕಾಗಿ ನೀವು ಕೊಡದೇ ಇರುವ ಸಾಲವನ್ನು ತೀರಿಸುವವರೆಗೆ ಅವರು ಸಾಲವನ್ನು ಕೊಡದೇ ಇರುವುದರಿಂದ ಕಾರ್ಪೊರೇಷನ್ ಮಾಡಿ ಅದರ ಮುಖಾಂತರ ಹಣವನ್ನು ಪಡೆದುಕೊಳ್ಳುವುದಕ್ಕೆ ನಮ್ಮ ಸರ್ಕಾರ ವ್ಯವಸ್ಥೆ ಮಾಡುತ್ತದೆ. ಶ್ರೀಮಾನ್ ರಾಜೀವ್ ಗಾಂಧಿಯವರ ಹೆಸರನ್ನು ಏಕೆ ಇಟ್ಟದ್ದೇವೆಂದರೆ, ಶ್ರೀ ಪೂರಾರ್ಜಿ ದೇಸಾಯಿಯವರ ವಸತಿ ಶಾಲೆ ಎಂದು ಕೂಡ ಹೆಸರನ್ನು ಇಟ್ಟಿದ್ದರು. ಏಕೆ ಈ ಭಾಷಣ ? ಏಕೆ ಅವರು ಕಾಂಗ್ರೆಸ್ ಸ್ವತ್ತಾ ? ಸ್ವಾಮಿ, ಕರ್ನಾಟಕದ ಜನತೆ ಬರೀ ನೀವು ಹೇಳುವುದನ್ನು ಮಾತ್ರ ಕೇಳುವುದಕ್ಕಾಗುವುದಿಲ್ಲ, ಅದಕ್ಕೆ ಇನ್ನೊಂದು ಮುಖ ಇದೆ ಎನ್ನುವುದು ಕರ್ನಾಟಕದ ಜನತೆ ಗೊತ್ತಾಗಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ವೈ. ಕೆ. ರಾಮಯ್ಯನವರಿಗೆ ಈ ದುರ್ಗತಿ ಬಂತಲ್ಲ! ಎಂದು.

ಶ್ರೀ ವೈ. ಕೆ. ರಾಮಯ್ಯ : ಆಯಿತು ಸಂತೋಷ. ನಿಮಗೆ ಬಂದಿರುವ ಸದ್ಗತಿ ನನಗೆ ಗೊತ್ತಿದೆ!

ಶ್ರೀ ಬೈರೇಗೌಡ : ಇಂತಹ ದುರ್ಗತಿ ಬರಬಾರದೆಂದು ನನ್ನ ಇಚ್ಛೆಯಾಗಿದೆ.

ಶ್ರೀ ವೈ. ಕೆ. ರಾಮಯ್ಯ : ಸ್ವಾಮಿ, ನಾನು ಹೇಳುವುದನ್ನು ಕೇಳಿ, ಪತ್ರಿಕೆಯಲ್ಲಿ ಬರೀ ಅವರು ಹೇಳುವುದನ್ನೆ ಬರೆದರೆ ಆಗುವುದಿಲ್ಲ. ಬೆಳಿಗ್ಗೆಯಿಂದ ಮಾನ್ಯ ಸಿಂಬ್ಯಾರವರು ಹೇಳುತ್ತಾರೆ. ಆದಳಿತದಲ್ಲಿ ಬದಲಾವಣೆಯಾಗಿಲ್ಲ ಎಂದು. ಏನು ಬದಲಾವಣೆಯಾಗಬೇಕು ಸ್ವಾಮಿ ? ಅಂದರೆ ಬದಲಾವಣೆಯ ಅವಶ್ಯಕತೆ ಇದೆ ಎಂದು ಅವರು ಒಪ್ಪಿಕೊಂಡಂತಾಯಿತು. ಅವರು ಮಾಡಿರುವಂತಹ ವ್ಯವಸ್ಥೆಯಲ್ಲಿ ನ್ಯೂನತೆ ಇದೆ, ಅವರು ತಂದಿರತಕ್ಕಂಥ ವ್ಯವಸ್ಥೆ ಸರಿಯಾಗಿಲ್ಲ. ಒಳ್ಳೆಯದಕ್ಕಾಗಿ ಅದು ಬದಲಾವಣೆಯಾಗಬೇಕು ಎಂದು ಅವರೇ ಒಪ್ಪಿಕೊಂಡಾಂತಾಯಿತು.

(ಬಿ) ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 2000ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "2000ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವನೆಯನ್ನು ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ರಿಂದ 3ರವರೆಗೆ

ಉಪಾಧ್ಯಕ್ಷರು : ಖಂಡ 2 ರಿಂದ 3ರವರೆಗೂ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 3ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 2000ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "2000 ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಪ್ರಕಟಣೆ

ಉಪಾಧ್ಯಕ್ಷರು : ಶಾಸಕರ ಭವನದ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶಾಸಕರ ವಸತಿ ಸಂಕೀರ್ಣದ ಉದ್ಘಾಟನಾ ಸಮಾರಂಭವನ್ನು ಈ ದಿನ ಸಂಜೆ 6-00 ಗಂಟೆಗೆ ಏರ್ಪಡಿಸಲಾಗಿದೆ. ವಸತಿ ಸಂಕೀರ್ಣವನ್ನು ಘನತೆವೆತ್ತ ರಾಜ್ಯಪಾಲರು ಉದ್ಘಾಟಿಸುವರು ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರು ವಿಧಾನಸಭಾ ಸದಸ್ಯರ ಪರಿಚಯ ಪುಸ್ತಕ ಬಿಡುಗಡೆ ಮಾಡುವರು. ಈ ಸಮಾರಂಭದ ನಂತರ ರಾತ್ರಿ 8-00 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಲಾಗಿದೆ. ಸದರಿ ಸಮಾರಂಭ ಹಾಗೂ ಭೋಜನಕೂಟದಲ್ಲಿ ಭಾಗವಹಿಸಬೇಕೆಂದು ಮಾನ್ಯ ಸದಸ್ಯರಲ್ಲಿ ಹಾಗೂ ಪತ್ರಕರ್ತರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಈಗ ಸಭೆಯನ್ನು ಮುಂದೂಡಿ, ನಾಳೆ ಬೆಳಿಗ್ಗೆ 9-30 ಗಂಟೆಗೆ ಮತ್ತೆ ಸೇರುವುದು.

(ಸದನವು ಸಂಜೆ 5 ಗಂಟೆ 2 ನಿಮಿಷಕ್ಕೆ ಮುಕ್ಕಾಯಗೊಂಡು ಪುನಃ ದಿನಾಂಕ : 31-03-2000ದ ಶುಕ್ರವಾರ ಬೆಳಿಗ್ಗೆ 9-30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)